# ನಿವೃತ್ತ ಪಾಲಿಟೆಕ್ನಿಕ್ ಉಪನ್ಯಾಸಕರ ಸಮಸ್ಯೆಗಳಿಗೆ ಸ್ಪಂದಿಸಿದ ಸಭಾಪತಿ ಬಸವರಾಜ್ ಹೊರಟ್ಟಿ



**ಬೆಂಗಳೂರ** : ಕರ್ನಾಟಕ ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ದಶಕಗಳಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳನ್ನೆಲ್ಲ ಬಸವರಾಜ ಹೊರಟ್ಟಿ ಅವರು ಸದನದ ಒಳಗೆ ಸದನದ ಹೊರಗೆ ತಮ್ಮ ಸುದೀರ್ಘ ಹೋರಾಟಗಳಿಂದಲೇ ಪರಿಹಾರ ಒದಗಿಸಿಕೊಟ್ಟಿದ್ದಾರೆ. ಅದರಲ್ಲೂ ಖಾಸಗಿ ಪಾಲಿಟೆಕ್ನಿಕ್ ಕಾಲೇಜ್ ಗಳಿಗೆ ಅನುದಾನ ದೊರಕಿಸಿಕೊಡುವ ಸಂದರ್ಭದಲ್ಲಿ ಹೊರಟ್ಟಿ ಅವರ ಹೋರಾಟ ಅನನ್ಯ. ಈಗ ಈ ಸಿಬ್ಬಂದಿ ನೆಮ್ಮದಿಯಿಂದ ಇದ್ದಾರೆ ಎಂದರೆ ಅದಕ್ಕೆ ಕಾರಣ ಬಸವರಾಜ್ ಹೊರಟ್ಟಿ ಅವರು.

ಒಂದು ಸಮಸ್ಯೆ ಬಗೆಹರಿಸುವದ್ರೊಳಗಾಗಿ ಮತ್ತೊಂದು ಸಮಸ್ಯೆ ಶಿಕ್ಷಣ ಕ್ಷೇತ್ರದಲ್ಲಿ ಹುಟ್ಟಿಕೊಳ್ಳುವುದು ಸ್ವಾಭಾವಿಕವಾಗಿದೆ. ಪ್ರಸ್ತುತ ರಾಜ್ಯದ ನಿವೃತ್ತ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ಸಾಕಷ್ಟು ಸಮಸ್ಯೆಯನ್ನ ಹಾಗೂ ಹಲವಾರು ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ. ಇಂದು ಬೆಂಗಳೂರಿನಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರಗಳ ಸಂಘದ ನಿಯೋಗ ಇಂದು ಬೆಂಗಳೂರಿನಲ್ಲಿ ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಭೇಟಿಯಾಗಿ ತಮ್ಮ ಅಳಲನ್ನ ತೋಡಿಕೊಂಡರು. ತಮಗಾಗುವ ಅನ್ಯಾಯ ತಾರತಮ್ಯದ ಕುರಿತು ಸುಧೀರ್ಘವಾಗಿ ನಿಯೋಗದ ಸದಸ್ಯರು ಸಭಾಪತಿಗಳ ಗಮನಕ್ಕೆ ತಂದರು. ಎಲ್ಲವನ್ನು ಅತ್ಯಂತ ಸಮಾಧಾನದಿಂದ ಹೊರಟ್ಟಿ ಅವರು ಆಲಿಸಿದರು. ತದನಂತರ ಸಂಬಂಧಿಸಿದ ಇಲಾಖೆ ಮುಖ್ಯಸ್ಥರಿಗೆ ದೂರವಾಣಿ ಮಾಡೋ ಮೂಲಕ ಈ ವರ್ಗಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ಗಮನ ಸೆಳೆದು ತಕ್ಷಣ ಸಮಸ್ಯೆಗೆ ಸ್ಪಂದಿಸಬೇಕೆಂದು ಸೂಚಿಸಿದರು. ಸರಕಾರಿ ಖಾಸಗಿ ಎನ್ನುವ ತಾರತಮ್ಯ ಬಿಟ್ಟು ಎಲ್ಲ ಸಿಬ್ಬಂದಿಗಳ ಸಮಸ್ಯೆಗಳನ್ನು ಒಂದೇ ಎಂದು ಆಲಿಸಿ ಪರಿಹಾರ ಒದಗಿಸಬೇಕೆಂದು ಹೇಳಿದರು. ನಿವೃತ್ತ ಉಪನ್ಯಾಸಕರು ತಮ್ಮ ಕಚೇರಿಗೆ ಅಲಯದಂತೆ ನೋಡಿಕೊಳ್ಳಬೇಕು ಮುಂದೆ ಈ ರೀತಿ ಆದರೆ ತಾವೆಲ್ಲ ಗಂಭೀರ ಸಮಸ್ಯೆಯನ್ನ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ಸಹ ನೀಡಿದರು. ಈ ಸಂದರ್ಭದಲ್ಲಿ ಸಂಘಟನೆಯ ಮುಖ್ಯಸ್ಥರಾದ ಜಗದೀಶ್ ದ್ಯಾವಪ್ಪನವರ್ ಸಭಾಪತಿ ಅವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಳೇಕರ್ ಸೇರಿದಂತೆ ಅನೇಕ ಪದಾಧಿಕಾರಿಗಳು ನಿವೃತ್ತ ಉಪನ್ಯಾಸಕರು ಮುಂತಾದವರು ಉಪಸ್ಥಿತರಿದ್ದರು.

ಹಾಜರಿದ್ದರು.

# ನಿವೃತ್ತ ಪಾಲಿಟೆಕ್ನಿಕ್ ಉಪನ್ಯಾಸಕರ ಸಮಸ್ಯೆಗಳಿಗೆ ಸ್ಪಂದಿಸಿದ ಸಭಾಪತಿ ಬಸವರಾಜ್ ಹೊರಟ್ಟಿ....

**ಗದಗ ಸಂಜೆ ವಾರ್ತೆ :**

ಕರ್ನಾಟಕ ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ದಶಕಗಳಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳನ್ನೆಲ್ಲ ಬಸವರಾಜ ಹೊರಟ್ಟಿ ಅವರು ಸದನದ ಒಳಗೆ ಸದನದ ಹೊರಗೆ ತಮ್ಮ ಸುದೀರ್ಘ ಹೋರಾಟಗಳಿಂದಲೇ ಪರಿಹಾರ ಒದಗಿಸಿಕೊಟ್ಟಿದ್ದಾರೆ. ಅದರಲ್ಲೂ ಖಾಸಗಿ ಪಾಲಿಟೆಕ್ನಿಕ್ ಕಾಲೇಜ್ ಗಳಿಗೆ ಅನುದಾನ ದೊರಕಿಸಿಕೊಡುವ ಸಂದರ್ಭದಲ್ಲಿ ಹೊರಟ್ಟಿ ಅವರ ಹೋರಾಟ ಅನನ್ಯ. ಈಗ ಈ ಸಿಬ್ಬಂದಿ ನೆಮ್ಮದಿಯಿಂದ ಇದ್ದಾರೆ ಎಂದ-ರೆ ಅದಕ್ಕೆ ಕಾರಣ ಬಸವರಾಜ್ ಹೊರಟ್ಟಿ ಅವರು.



ಒಂದು ಸಮಸ್ಯೆ ಬಗೆಹರಿಸುವದರೊಳಗಾಗಿ ಮತ್ತೊಂದು ಸಮಸ್ಯೆ ಶಿಕ್ಷಣ ಕ್ಷೇತ್ರದಲ್ಲಿ ಹುಟ್ಟಿಕೊಳ್ಳುವುದು ಸ್ವಾಭಾವಿಕವಾಗಿದೆ. ಪ್ರಸ್ತುತ ರಾಜ್ಯದ ನಿವೃತ್ತ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ಸಾಕಷ್ಟು ಸಮಸ್ಯೆಯನ್ನ ಹಾಗೂ ಹಲವಾರು ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ. ಇಂದು ಬೆಂಗಳೂರಿನಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರಗಳ ಸಂಘದ ನಿಯೋಗ ಇಂದು ಬೆಂಗಳೂರಿನಲ್ಲಿ ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಭೇಟಿಯಾಗಿ ತಮ್ಮ ಅಳಲನ್ನ ತೋಡಿಕೊಂಡರು. ತಮಗಾಗುವ ಅನ್ಯಾಯ ತಾರತಮ್ಯದ ಕುರಿತು ಸುಧೀರ್ಘವಾಗಿ ನಿಯೋಗದ ಸದಸ್ಯರು ಸಭಾಪತಿಗಳ ಗಮನಕ್ಕೆ ತಂದರು. ಎಲ್ಲವನ್ನು ಅತ್ಯಂತ ಸಮಾಧಾನದಿಂದ ಹೊರಟ್ಟಿ ಅವರು ಆಲಿಸಿದರು. ತದನಂತರ ಸಂಬಂಧಿಸಿದ ಇಲಾಖೆ ಮುಖ್ಯಸ್ಥರಿಗೆ ದೂರವಾಣಿ ಮಾಡೋ ಮೂಲಕ ಈ ವರ್ಗಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ಗಮನ ಸೆಳೆದು ತಕ್ಷಣ ಸಮಸ್ಯೆಗೆ ಸ್ಪಂದಿಸಬೇಕೆಂದು ಸೂಚಿಸಿದರು. ಸರಕಾರಿ ಖಾಸಗಿ ಎನ್ನುವ ತಾರತಮ್ಯ ಬಿಟ್ಟು ಎಲ್ಲ ಸಿಬ್ಬಂದಿಗಳ ಸಮಸ್ಯೆಗಳನ್ನು ಒಂದೇ ಎಂದು ಆಲಿಸಿ ಪರಿಹಾರ ಒದಗಿಸಬೇಕೆಂದು ಹೇಳಿದರು. ನಿವೃತ್ತ ಉಪನ್ಯಾಸಕರು ತಮ್ಮ ಕಚೇರಿಗೆ ಅಲಿಯದಂತೆ ನೋಡಿಕೊಳ್ಳಬೇಕು ಮುಂದೆ ಈ ರೀತಿ ಆದರೆ ತಾವೆಲ್ಲ ಗಂಭೀರ ಸಮಸ್ಯೆಯನ್ನ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ಸಹ ನೀಡಿದರು. ಈ ಸಂದರ್ಭದಲ್ಲಿ ಸಂಘಟನೆಯ ಮುಖ್ಯಸ್ಥರಾದ ಜಗದೀಶ್ ದ್ಯಾವಪ್ಪನವರ್ ಸಭಾಪತಿ ಅವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಳೇಕರ್ ಸೇರಿದಂತೆ ಅನೇಕ ಪದಾಧಿಕಾರಿಗಳು ನಿವೃತ್ತ ಉಪನ್ಯಾಸಕರು ಮುಂತಾದವರು ಉಪಸ್ಥಿತರಿದ್ದರು.

# ನಿವೃತ್ತ ಪಾಲಿಟೆಕ್ನಿಕ್ ಉಪನ್ಯಾಸಕರ ಸಮಸ್ಯೆಗಳಿಗೆ ಸ್ಪಂದಿಸಿದ ಸಭಾಪತಿ ಬಸವರಾಜ ಹೊರಟ್ಟಿ



ಬೆಂಗಳೂರು, ಮಾ.15. ಕರ್ನಾಟಕ ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ದಶಕಗಳಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳನ್ನೆಲ್ಲ ಬಸವರಾಜ ಹೊರಟ್ಟಿ ಅವರು ಸದನದ ಒಳಗೆ, ಸದನದ ಹೊರಗೆ ತಮ್ಮ ಸುದೀರ್ಘ ಹೋರಾಟಗಳಿಂದಲೇ ಪರಿಹಾರ ಒದಗಿಸಿಕೊಟ್ಟಿದ್ದಾರೆ. ಅದರಲ್ಲೂ ಖಾಸಗಿ ಪಾಲಿಟೆಕ್ನಿಕ್ ಕಾಲೇಜ್‌ಗಳಿಗೆ ಅನುದಾನ ದೊರಕಿಸಿಕೊಡುವ ಸಂದರ್ಭದಲ್ಲಿ ಹೊರಟ್ಟಿ ಅವರ ಹೋರಾಟ ಅನನ್ಯ. ಈಗ ಈ ಸಿಬ್ಬಂದಿ ನೆಮ್ಮದಿಯಿಂದ ಇದ್ದಾರೆ ಎಂದರೆ ಅದಕ್ಕೆ ಕಾರಣ ಬಸವರಾಜ ಹೊರಟ್ಟಿ ಅವರು.

ಒಂದು ಸಮಸ್ಯೆ ಬಗೆಹರಿಸುವದರ ಒಳಗಾಗಿ ಮತ್ತೊಂದು ಸಮಸ್ಯೆ ಶಿಕ್ಷಣ ಕ್ಷೇತ್ರದಲ್ಲಿ ಹುಟ್ಟಿಕೊಳ್ಳುವುದು ಸ್ವಾಭಾವಿಕವಾಗಿದೆ. ಪ್ರಸ್ತುತ ರಾಜ್ಯದ ನಿವೃತ್ತ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ಸಾಕಷ್ಟು ಸಮಸ್ಯೆಯನ್ನು ಹಾಗೂ ಹಲವಾರು ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ. ಇಂದು ಬೆಂಗಳೂರಿನಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳ ಸಂಘದ ನಿಯೋಗ ಇಂದು ಬೆಂಗಳೂರಿನಲ್ಲಿ ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಭೇಟಿಯಾಗಿ ತಮ್ಮ ಅಳಲನ್ನು ತೋಡಿಕೊಂಡರು. ತಮಗಾಗುವ ಅನ್ಯಾಯ ತಾರತಮ್ಯದ ಕುರಿತು ಸುಧೀರ್ಘವಾಗಿ ನಿಯೋಗದ ಸದಸ್ಯರು ಸಭಾಪತಿಗಳ ಗಮನಕ್ಕೆ ತಂದರು. ಎಲ್ಲವನ್ನು ಅತ್ಯಂತ ಸಮಾಧಾನದಿಂದ ಹೊರಟ್ಟಿ ಅವರು ಆಲಿಸಿದರು. ತದನಂತರ ಸಂಬಂಧಿಸಿದ ಇಲಾಖೆ ಮುಖ್ಯಸ್ಥರಿಗೆ ದೂರವಾಣಿ ಮಾಡೋ ಮೂಲಕ ಈ ವರ್ಗಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ಗಮನ ಸೆಳೆದು ತಕ್ಷಣ ಸಮಸ್ಯೆಗೆ ಸ್ಪಂದಿಸಬೇಕೆಂದು ಸೂಚಿಸಿದರು. ಸರಕಾರಿ ಖಾಸಗಿ ಎನ್ನುವ ತಾರತಮ್ಯ ಬಿಟ್ಟು ಎಲ್ಲ ಸಿಬ್ಬಂದಿಗಳ ಸಮಸ್ಯೆಗಳನ್ನು ಒಂದೇ ಎಂದು ಆಲಿಸಿ ಪರಿಹಾರ ಒದಗಿಸಬೇಕೆಂದು ಹೇಳಿದರು. ನಿವೃತ್ತ ಉಪನ್ಯಾಸಕರು ತಮ್ಮ ಕಚೇರಿಗೆ ಅಲಯುದಂತೆ ನೋಡಿಕೊಳ್ಳಬೇಕು ಮುಂದೆ ಈ ರೀತಿ ಆದರೆ ತಾವೆಲ್ಲ ಗಂಭೀರ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ಸಹ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆಯ ಮುಖ್ಯಸ್ಥರಾದ ಜಗದೀಶ್ ದ್ಯಾವಪ್ಪನವರ್ ಸಭಾಪತಿ ಅವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಳೇಕರ್ ಸೇರಿದಂತೆ ಅನೇಕ ಪದಾಧಿಕಾರಿಗಳು ನಿವೃತ್ತ ಉಪನ್ಯಾಸಕರು ಮುಂತಾದವರು ಉಪಸ್ಥಿತರಿದ್ದರು.

# ನಿವೃತ್ತ ಪಾಲಿಟೆಕ್ನಿಕ್ ಉಪನ್ಯಾಸಕರ ಸಮಸ್ಯೆಗಳಿಗೆ ಸ್ಪಂದಿಸಿದ ಸಭಾಪತಿ ಬಸವರಾಜ್ ಹೊರಟ್ಟಿ....



**ಹುಬ್ಬಳ್ಳಿ:** ಕರ್ನಾಟಕ ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ದಶಕಗಳಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದು ಅವುಗಳನ್ನೆಲ್ಲ ಬಸವರಾಜ ಹೊರಟ್ಟಿ ಅವರು ಸದನದ ಒಳಗೆ ಸದನದ ಹೊರಗೆ ತಮ್ಮ ಸುದೀರ್ಘ ಹೋರಾಟಗಳಿಂದಲೇ ಪರಿಹಾರ ಒದಗಿಸಿಕೊಟ್ಟಿದ್ದಾರೆ. ಅದರಲ್ಲೂ ಖಾಸಗಿ ಪಾಲಿಟೆಕ್ನಿಕ್ ಕಾಲೇಜ್ ಗಳಿಗೆ ಅನುದಾನ ದೊರಕಿಸಿಕೊಡುವ ಸಂದರ್ಭದಲ್ಲಿ ಹೊರಟ್ಟಿ ಅವರ ಹೋರಾಟ ಅನನ್ಯ. ಈಗ ಈ ಸಿಬ್ಬಂದಿ ನೆಮ್ಮದಿಯಿಂದ ಇದ್ದಾರೆ ಎಂದರೆ ಅದಕ್ಕೆ ಕಾರಣ ಬಸವರಾಜ್ ಹೊರಟ್ಟಿ ಅವರು ಒಂದು ಸಮಸ್ಯೆ ಬಗೆಹರಿಸುವದರೊಳಗಾಗಿ ಮತ್ತೊಂದು ಸಮಸ್ಯೆ ಶಿಕ್ಷಣ ಕ್ಷೇತ್ರದಲ್ಲಿ ಹುಟ್ಟಿಕೊಳ್ಳುವುದು ಸ್ವಾಭಾವಿಕವಾಗಿದೆ. ಪ್ರಸ್ತುತ ರಾಜ್ಯದ ನಿವೃತ್ತ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರುಗಳು ಸಾಕಷ್ಟು ಸಮಸ್ಯೆಯನ್ನ ಹಾಗೂ ಹಲವಾರು ತಾರತಮ್ಯಗಳನ್ನು ಎದುರಿಸುತ್ತಿದ್ದಾರೆ. ಇಂದು ಬೆಂಗಳೂರಿನಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಉಪನ್ಯಾಸಕರಗಳ ಸಂಘದ ನಿಯೋಗ ಬೆಂಗಳೂರಿನಲ್ಲಿ ಸಭಾಪತಿ ಬಸವರಾಜ್ ಹೊರಟ್ಟಿ ಅವರನ್ನು ಭೇಟಿಯಾಗಿ ತಮ್ಮ ಅಳಲನ್ನ ತೋಡಿಕೊಂಡರು.

ತಮಗಾಗುವ ಅನ್ಯಾಯ ತಾರತಮ್ಯದ ಕುರಿತು ಸುಧೀರ್ಘವಾಗಿ ನಿಯೋಗದ ಸದಸ್ಯರು ಸಭಾಪತಿಗಳ ಗಮನಕ್ಕೆ ತಂದರು. ಎಲ್ಲವನ್ನು ಅತ್ಯಂತ ಸಮಾಧಾನದಿಂದ ಹೊರಟ್ಟಿ ಅವರು ಆಲಿಸಿದರು. ತದನಂತರ ಸಂಬಂಧಿಸಿದ ಇಲಾಖೆ ಮುಖ್ಯಸ್ಥರಿಗೆ ದೂರವಾಣಿ ಮಾಡೋ ಮೂಲಕ ಈ ವರ್ಗಕ್ಕೆ ಆಗುತ್ತಿರುವ ಅನ್ಯಾಯದ ಕುರಿತು ಗಮನ ಸೆಳೆದು ತಕ್ಷಣ ಸಮಸ್ಯೆಗೆ ಸ್ಪಂದಿಸಬೇಕೆಂದು ಸೂಚಿಸಿದರು. ಸರಕಾರಿ ಖಾಸಗಿ ಎನ್ನುವ ತಾರತಮ್ಯ ಬಿಟ್ಟು ಎಲ್ಲ ಸಿಬ್ಬಂದಿಗಳ ಸಮಸ್ಯೆಗಳನ್ನು ಒಂದೇ ಎಂದು ಆಲಿಸಿ ಪರಿಹಾರ ಒದಗಿಸಬೇಕೆಂದು ಹೇಳಿದರು.

ನಿವೃತ್ತ ಉಪನ್ಯಾಸಕರು ತಮ್ಮ ಕಚೇರಿಗೆ ಅಲೆಯದಂತೆ ನೋಡಿಕೊಳ್ಳಬೇಕು ಮುಂದೆ ಈ ರೀತಿ ಆದರೆ ತಾವೆಲ್ಲ ಗಂಭೀರ ಸಮಸ್ಯೆಯನ್ನ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ಸಹ ನೀಡಿದರು. ಈ ಸಂದರ್ಭದಲ್ಲಿ ಸಂಘಟನೆಯ ಮುಖ್ಯಸ್ಥರಾದ ಜಗದೀಶ್ ದ್ಯಾವಪ್ಪನವರ್ ಸಭಾಪತಿ ಅವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಳೀಕರ್ ಸೇರಿದಂತೆ ಅನೇಕ ಪದಾಧಿಕಾರಿಗಳು ನಿವೃತ್ತ ಉಪನ್ಯಾಸಕರು ಮುಂತಾದವರು ಉಪಸ್ಥಿತರಿದ್ದರು.